ತುಂಗಭದ್ರ ಜಲಾಶಯದಲ್ಲಿ ಹೂಳಿನ ಪ್ರಮಾಣ

254 (591) ಶ್ರೀ ಅಲ್ಲಂ ವೀರಭದ್ರ (ಕುರುಗೋಡು) : ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಂಗಭದ್ರಾ ಜಲಾಶಯದಲ್ಲಿ ಹೂಳಿನ ಪ್ರಮಾಣ ಪ್ರತಿವರ್ಷ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಹೂಳಿನಿಂದ ಎಷ್ಟು ಪ್ರಮಾಣದ ನೀರು ನಷ್ಟವಾಗುತ್ತಿದೆ;

ಇ) ನೀರಿನ ಪ್ರಮಾಣ ಕುಂಠಿತಗೊಂಡಿರುವುದರಿಂದ ಕರ್ನಾಟಕ ಹಾಗೂ ಆಂಧ್ರ ಪ್ರದೇಶ ರಾಜ್ಯಗಳು ಮಾತುಕತೆ ಮೂಲಕ ನೀರಿನ ಲಭ್ಯತೆಗೆ ಅನುಗುಣವಾಗಿ ನೀರಿನ ಮರು ಹಂಚಿಕೆ ಮಾಡಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ. ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರಿಂದ) :

ಅ) ಹೌದು

ಆ) 21 ಟಿ ಎಂ ಸಿ

ಇ) ಬಚಾವತ್ ಅವಾರ್ಡ್‌ನಲ್ಲಿರುವ ಮಾರ್ಗಸೂಚಿಯಂತೆ ಆಯಾಯ ವರ್ಷಗಳಲ್ಲಿ ಲಭ್ಯವಿರುವ ನೀರಿನ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡು ಎರಡು ರಾಜ್ಯಗಳಿಗೆ ಸಿಗಬೇಕಿರುವ ನೀರಿನ ಪ್ರಮಾಣದ ಹಂಚಿಕೆ ಮಾಡಿ ನೀರನ್ನು ಬಳಸಲಾಗುತ್ತಿದೆ.

ರಾಜ್ಯದಲ್ಲಿರುವ ಜೈಲುಗಳ ಸ್ಥಿತಿಗತಿ ಕುರಿತು

255 (592) ಶ್ರೀ ಅಲ್ಲಂ ವೀರಭದ್ರ (ಕುರುಗೋಡು) : ಮಾನ್ಯ ಕಾರಾಗೃಹ, ಗೃಹ ರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಜೈಲುಗಳ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ನಡೆಸಲು ಗೃಹ ಇಲಾಖೆ ಉಪ ಕಾರ್ಯದರ್ಶಿಯವರನ್ನು ಸರ್ಕಾರ ನೇಮಿಸಲಾಗಿತ್ತೇ?

ಆ) ಹಾಗಿದ್ದಲ್ಲಿ ಸರ್ಕಾರಕ್ಕೆ ಅದರ ವರದಿ ಸಲ್ಲಿಸಿದ್ದಾರೆಯೇ?

ಇ) ಈ ವರದಿಯಲ್ಲಿ ಸೂಚಿಸಿರುವ ಮುಖ್ಯ ಅಂಶಗಳು : ಶಿಫಾರಸ್ಸುಗಳು ಯಾವುವು?

ಈ) ಈ ಶಿಫಾರಸ್ಸುಗಳಲ್ಲಿ ಸರ್ಕಾರ ಯಾವ ಯಾವ ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸಿದೆ.

ಶ್ರೀ ವಿ. ಸೋಮಣ್ಣ (ಕಾರಾಗೃಹ, ಗೃಹ ರಕ್ಷಣೆ ದಳ ನಾಗರೀಕ ರಕ್ಷಣೆಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು)

ಅ) ಹೌದು, ಆದರೆ ಜೈಲುಗಳ ಸ್ಥಿತಿಗತಿಗಳ ಬಗೆಗೆ ಅಧ್ಯಯನ ಮಾಡಲು ತಿಳಿಸಿರಲಿಲ್ಲ. ಜೈಲುಗಳಿಗೆ ಖರೀದಿಸಲಾಗುವ ವಸ್ತುಗಳ ಖರೀದಿ ವ್ಯವಹಾರಗಳ ಬಗೆಗೆ ತನಿಖೆ ನಡೆಸಲು ತಿಳಿಸಲಾಗಿದ್ದಿತು.

ಆ) ಹೌದು

ಇ) ಅನುಬಂಧದಲ್ಲಿ ನೀಡಲಾಗಿದೆ.

ಈ) ಸರ್ಕಾರ ಶಿಫಾರಸ್ಸುಗಳನ್ನು ಪರಿಶೀಲಿಸುತ್ತಿದೆ.

ಅನುಬಂಧ - ಅ

(1) ಮಹಾನಿರ್ದೇಶಕರು ಸಹಕಾರ ಸಂಘಗಳನ್ನು ಆಯ್ಕೆ ಮಾಡುವಾಗ ಅವುಗಳ ಪೂರ್ವಾಪರಗಳ ಬಗ್ಗೆ ಪೂರ್ಣ ಮಾಹಿತಿ ತರಿಸಿಕೊಳ್ಳಬೇಕು. ಆಯಾ ಭಾಗಗಳಲ್ಲಿ ವ್ಯವಹರಿಸುತ್ತಿರುವ ಸಂಘಗಳನ್ನು ಮಾತ್ರ ಪರಿಗಣಿಸಬೇಕು. ಅವು ಸ್ವತ: ವ್ಯವಹಾರ ಮಾಡುತ್ತಿವೆಯೇ ಅಥವಾ ಅವುಗಳ ನೆರಳಿನಲ್ಲಿ ಮಧ್ಯವರ್ತಿಗಳು ವ್ಯವಹರಿಸುತ್ತಿರುವರೇ ಎಂಬುದನ್ನು ಪರಿಶೀಲನೆಯಿಂದ ಖಾತರಿ ಮಾಡಿ ಕೊಳ್ಳಬೇಕು.

(2) ಸಹಕಾರ ಸಂಘಗಳು ಯಾವ ವಸ್ತುಗಳ ಬಗ್ಗೆ ವ್ಯವಹಾರ ಮಾಡುತ್ತಿವೆಯೋ ಅವುಗಳನ್ನು ನಿಗದಿಪಡಿಸಬೇಕು. ಹಾಗೂ ಅದೇ ಗುಣಮಟ್ಟದ ಸಾಮಾಗ್ರಿಗಳು ಖರೀದಿಯಾಗದಂತೆ ಒಪ್ಪಂದ ಮಾಡಿಕೊಳ್ಳಬೇಕು.

(3) ಕಾರಾಗೃಹಗಳ ಆಹಾರ ಸಾಮಾಗ್ರಿಗಳ ಗುಣಮಟ್ಟವನ್ನು ಆಹಾರ ಇಲಾಖೆಯ ಸಹಯೋಗದಿಂದ ನಿಗದಿಪಡಿಸಬೇಕು. ಹಾಗೂ ಅದೇ ಗುಣಮಟ್ಟದ ಸಾಮಾಗ್ರಿಗಳು ಖರೀದಿಯಾಗದಂತೆ ಒಪ್ಪಂದ ಮಾಡಿಕೊಳ್ಳಬೇಕು.

(4) ಆಹಾರ ಸಾಮಾಗ್ರಿಗಳು ಖರೀದಿಯಾಗ ಅವುಗಳ ಬಿಲ್ಲುಗಳ ಸಂದಾಯವಾಗುವವರೆಗೆ, ಸಾಧ್ಯವಾದ ಪದಾರ್ಥಗಳಿಗೆ ಸ್ಯಾಂಪಲ್ಲುಗಳನ್ನು ಕಾದಿರಿಸುವ ವ್ಯವಸ್ಥೆ ಮಾಡಬೇಕು. ಸದರಿಯಾದ ಸ್ಯಾಂಪಲ್ಲು ಸಂಗ್ರಹಿಸುವ ಬಗ್ಗೆಯೂ ಯೋಗ್ಯ ವ್ಯವಸ್ಥೆ ಮಾಡಬೇಕು.

(5) ಮಾರುಕಟ್ಟೆ ಇಲಾಖೆಯೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡು ಆಯಾ ಪ್ರದೇಶಗಳ ಮಾರುಕಟ್ಟೆ ಬೆಲೆಗಳ ವಿವರಗಳನ್ನು ನಿರ್ದೇಶಕರ ಹಾಗೂ ಅಧೀಕ್ಷಕರ ಕಛೇರಿಗಳಲ್ಲಿ ಇಟ್ಟುಕೊಳ್ಳಬೇಕು. ಬಿಲ್ಲುಗಳನ್ನು ಈ ದರಗಳ ಆಧಾರದ ಮೇಲೆಯೇ ತಪಾಸಣೆ ಮಾಡಿ ಒಪ್ಪಿಕೊಳ್ಳಬೇಕು.

(6) ಬಿಲ್ಲುಗಳನ್ನು ಮೇಲು ರುಜು ಮಾಡುವಾಗ ಕೇವಲ ಸರ್ಟಿಫಿಕೇಟುಗಳನ್ನು ಅವಲಂಬಿಸಬಾರದು. ದರಗಳ ಬಗ್ಗೆ ಟೆಸ್ಟ್ ಚೆಕ್ ಮಾಡಲೇಬೇಕು. ಯಾವುದರ ಬಗೆಗೆ ಇಂಥ ಪರೀಕ್ಷೆ ಮಾಡಲಾಯಿತೆಂಬುದರ ಬಗ್ಗೆ ಪೂರ್ಣ ವಿವರಗಳು, ಸಂಬಂಧಪಟ್ಟ ಕಡತದಲ್ಲಿ ಲಭ್ಯವಾಗಬೇಕು.

(7) ಯಾವ ವಸ್ತುಗಳನ್ನು ಸಹಕಾರ ಸಂಘಗಳು ನಿಯಮಿತವಾಗಿ ವ್ಯವಹರಿಸುವುದಿಲ್ಲವೋ ಅಂಥವುಗಳನ್ನು ಟೆಂಡರ್ ಮೂಲಕ ಖರೀದಿಸಬೇಕು.

(8) ಆಸ್ಪತ್ರೆಗಳಲ್ಲಿ ನಿಯಮಿತವಾಗಿ ಉಪಯೋಗಿಸುವ ಔಷಧಿಗಳನ್ನು ಹಾಗೂ ಪ್ರಯೋಗ ಶಾಲೆಯ ವಸ್ತುಗಳ ಖರೀದಿಯನ್ನು ಕೇಂದ್ರದ ಮಟ್ಟದಲ್ಲಿ ಮಾಡಿ ಪೂರೈಸುವ ವ್ಯವಸ್ಥೆ ಮಾಡಬೇಕು. ವಿಶೇಷವಾಗಿ ಬೇಕಾಗುವ ಔಷಧಗಳನ್ನು ಸ್ಥಳೀಯವಾಗಿ ಖರೀದಿಸಬಹುದು. ಇದರ ಬಗ್ಗೆ ಆರೋಗ್ಯ ಇಲಾಖೆಯನ್ನು ಸಂಪರ್ಕಿಸಿ ಸರಿಯಾದ ವ್ಯವಸ್ಥೆ ಮಾಡಬೇಕು.

(9) ಜೈಲಿನ ಅಡಿಗೆ ಮನೆಗಳನ್ನು ಆಧುನೀಕರಣಗೊಳಿಸಬೇಕು. ಜೈಲಿಗೆ ಕಸಬುದಾರರಾದ ಅಡಿಗೆಯವರನ್ನು ನೇಮಕ ಮಾಡಿಕೊಂಡು ಊಟದಲ್ಲಿ ವೈವಿಧ್ಯತೆ ತರಬೇಕು.

(10) ಜೈಲಿನಲ್ಲಿ ಕಲಿಸುತ್ತಿರುವ ಕಸಬುಗಳ ಮನವಿಮರ್ಶೆ ಮಾಡಬೇಕು. ಓಬೀರಾಯನ ಕಾಲದ ಕಸಬುಗಳನ್ನು ಕೈಬಿಡಬೇಕು ಹಾಗೂ ಈಗ ಚಾಲ್ತಿಯಲ್ಲಿರುವ ಕಸಬುಗಳ ಬಗೆಗೆ ಕೈಗಾರಿಕೆ ಇಲಾಖೆಯೊಂದಿಗೆ ಸಂಪರ್ಕಿಸಿ ಜಾರಿಗೆ ತರಬೇಕು.

(11) ಕಳೆದ ಐದು ವರ್ಷಗಳಲ್ಲಿ ಜೈಲುಗಳಿಗೆ ಸರಬರಾಜು ಮಾಡಿದ ಸಹಕಾರ ಸಂಘಗಳ ವ್ಯವಹಾರಗಳನ್ನು ಕೋ-ಆಪರೇಟರ್ ಆಡಿಟ್ ಇಲಾಖೆಯಿಂದ ಪರಿಶೀಲನೆ ಒಳಪಡಿಸಬೇಕು. ಹಾಗೂ ಅವುಗಳಿಗೆ ಸಂದಾಯವಾಗಿರಬಹುದಾದ ಹೆಚ್ಚುವರಿ ಮೊತ್ತವನ್ನು ವಸೂಲಿ ಮಾಡಲು ಸಾಧ್ಯವಾದ ಎಲ್ಲಾ ಕಾನೂನು ಕ್ರಮಗಳನ್ನು ಜರುಗಿಸಬೇಕು.

ಮಲಪ್ರಭಾ 3ನೇ ಹಂತ ಯೋಜನೆ ಮಂಜುರಾತಿ

256 (595) ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿನಗರ) : ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮಲಪ್ರಭಾ ನೀರಿನ 3ನೇ ಹಂತದ ಕಾಮಗಾರಿಯ ಯಾವ ಹಂತದಲ್ಲಿದೆ,

ಆ) ಸದರಿ ಯೋಜನಾ ವರದಿಗೆ ಸರ್ಕಾರದಿಂದ ಮಂಜೂರಾತಿ ದೊರೆತಿದೆಯೇ;

ಇ) ಹಾಗಿದ್ದಲ್ಲಿ ಈ ಯೋಜನೆಗೆ ಹಣಕಾಸಿನ ನೆರವು ಯಾವ ರೂಪದಲ್ಲಿ ಒದಗಿಸಲಾಗಿದೆ;

ಈ) ಈ ಯೋಜನೆ ಅಂದಾಜು ವೆಚ್ಚವೆಷ್ಟು ಈ ಕಾಮಗಾರಿ ಪೂರ್ಣಗೊಳ್ಳಲು ಬೇಕಾಗುವ ಅವಧಿ ಎಷ್ಟು ? (ಸಂಪೂರ್ಣ ವಿವರ ಒದಗಿಸುವುದು)

ಶ್ರೀ ಕೆ. ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) :

ಅ) ಮಲಪ್ರಭಾ ಯೋಜನೆಯಡಿಯಲ್ಲಿ 3ನೇ ಹಂತದ ಯೋಜನೆಯೆಂಬುದು ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಹುಬ್ಬಳ್ಳಿನಗರ ಕ್ಷೇತ್ರದಲ್ಲಿ ಕಾರ್ಡು ರಹಿತರಿಗೆ ಪಡಿತರ ಕಾರ್ಡು ವಿತರಣೆ

257 (594) ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಬ್ಬಳ್ಳಿನಗರ ವಿಧಾನ ಸಭಾ ಕ್ಷೇತ್ರದಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು ?

ಆ) ಈ ವಿಧಾನ ಸಭಾ ಕ್ಷೇತ್ರದಲ್ಲಿರುವ ಒಟ್ಟು ಮಹಾತ್ಮಗಾಂಧೀಜಿ ಭಾವಚಿತ್ರವಿರುವ ಹಸಿರು ಕಾರ್ಡುಗಳೆಷ್ಟು?